ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 47-53.
©*IIMRD*, Mysuru
www.iimrd.com

# ಗ್ರಾಮೀಣ ಆರ್ಥಿಕತೆಯಲ್ಲಿ ಪಶುಪಾಲನೆಯ ಪಾತ್ರ

**ಬೈರಪ್ಪರ ಏಕಾಂತಪ್ಪ*** **ಮತ್ತು ಡಾ ಹಾರಾಳು ಬುಳ್ಳಪ್ಪ****

*ಪಿಎಚ್.ಡಿ ಸಂಶೋಧನಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

** ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಜಿವಿವಿಪಿ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ.

**ಸಾರಾಂಶ: (Abstract)**

*ಮನುಷ್ಯನು ಆದಿಮ ಕಾಲದಿಂದ ಕಾಡು ಪ್ರಾಣಿಯಂತೆ ಕಾಡಿನಲ್ಲಿ ವಾಸ ಮಾಡುತ್ತಿದ್ದನು. ಗಿಡ, ಮರ, ಬಂಡೆಯ ಪೊಟರೆಗಳಲ್ಲಿ ವಾಸ ಮಾಡುತ್ತಿದ್ದನು. ಮನುಷ್ಯನ ಬುದ್ಧಿ ವಿಕಾಸವಾದಂತೆಲ್ಲಾ ಕಾಡಿನಲ್ಲಿ ಗೆಡ್ಡೆ ಗೆಣಸು ತಿಂದು ಬದುಕುತ್ತಿದ್ದ. ಆದಿ ಮಾನವ ಪ್ರಾರಂಭದಲ್ಲಿ ಭೇಟೆಯಾಡುವುದನ್ನು ಕಲಿತ ನಂತರ ಭೇಟೆ ಜೊತೆ ಸೌಮ್ಯ ಪ್ರಾಣಿಗಳನ್ನು ಬಳಸಿಕೊಂಡು ಕಾಡಿನ ಮಧ್ಯದಲ್ಲಿ ಇಳಿಜಾರು ಪ್ರದೇಶದಲ್ಲಿ ಕುಮರಿ ಬೇಸಾಯಮಾಡುವುದನ್ನು ಕಲಿತ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆಮಾರಿ ಜೀವನ ನಡೆಸುತ್ತಿದ್ದ ಮಾನವ ನಂತರ ಒಂದೆಡೆ ನೆಲೆ ನಿಂತು, ಕೃಷಿ ಜೀವನಕ್ಕೆ ಕಾಲಿಟ್ಟ. ಬಹುಮುಖ್ಯವಾಗಿ ಕೃಷಿಗೆ ಪಶುಗಳನ್ನು ಬಳಸಿಕೊಂಡು ಕೃಷಿ ಜೀವನ ಪ್ರಾರಂಭಿಸಿದ. ಪ್ರಸ್ತುತ ಲೇಖನದಲ್ಲಿ ಮಾನವನ ಜೀವನದಲ್ಲಿ ಪಶುಸಾಕಾಣಿಕೆ ಯಾವ ರೀತಿಯ ಪಾತ್ರವಹಿಸುತ್ತದೆ ಎಂಬುದನ್ನು ವಿಮರ್ಶಿಸಲಾಗಿದೆ.*

**ಮುಖ್ಯಪದಗಳು (Keywords):** ಪಶುಪಾಲನೆ, ಪಶುಸಂಗೋಪನೆ, ಉತ್ಪನ್ನಗಳು, ಜಾನಪದ, ಆರ್ಥಿಕತೆ.

## ಪೀಠಿಕೆ

ಕಾಲಾನಂತರ ಪಶುಮಂದೆಯೇ ಮಾನವನ ಆರ್ಥಿಕ ಮಾನದಂಡವಾಯಿತು. ಹಿಂದಿನ ಕಾಲದಲ್ಲಿ ಪಶುಗಳ ಸಂಪತ್ತನ್ನು ನೋಡಿ ಆರ್ಥಿಕತೆ ಹೇಗಿದೆ ಎಂಬುದನ್ನು ನೋಡುತ್ತಿದ್ದರು. ಮನೆ ಮಗಳನ್ನು ಮದುವೆಮಾಡಿಕೊಡಬೇಕಾದರೆ ಗಂಡಿನ ಮನೆಯಲ್ಲಿ ಹಸುಗಳನ್ನು ನೋಡಿ ಹೆಣ್ಣು ಕೊಡುತ್ತಿದ್ದರು. ಎತ್ತು ಇಲ್ಲದವನಿಗೆ ಎದೆಯಿಲ್ಲ ಎಂಬ ಮಾತೆ ಇದಕ್ಕೆ ಉದಾಹರಣೆ. ಗೊದಲಿ ಇದ್ದ ಮನೆ ಸಂಪತ್ಭರಿತವಾಗಿರುತ್ತದೆ ಎಂದು ನಿರ್ಧರಿಸಿ ಹೆಣ್ಣನ್ನು ಕೊಡುತ್ತಿದ್ದರು. ಅಶೋಕ ಮಹಾರಾಜನ ಕಾಲದಲ್ಲಿ ಪಶುಸಂಪತ್ತಿನಿಂದ ತೆರಿಗೆಯ ರೂಪದಲ್ಲಿ ಹೆಚ್ಚಿನ ಆದಾಯ ಬರುತ್ತಿತ್ತು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಆಗಿನ ಕಾಲದಲ್ಲಿ ದನಕರುಗಳನ್ನು ಎಂಟು ಭಾಗಗಳಾಗಿ ವಿಂಗಡಿಸಿರುವುದನ್ನು ನಾವು ಕಾಣಬಹುದಾಗಿದೆ. ಮೊದಲು ಹಾಲು ಕರೆಯುವ ಹಸುಗಳು, ವಾಸಕ್ಕೆ ಬರುವ ಹಸುಗಳು, ದೊಡ್ಡದನಗಳು, ಕರುಗಳನ್ನು ಹೊಂದಿರುವ ಹಸುಗಳು, ಹೋರಿಗಳು, ಅನಾರೋಗ್ಯದಿಂದ ಕೂಡಿರುವ ದನಗಳನ್ನು ಒಂದು ಭಾಗವಾಗಿ ವಿಂಗಡಿಸಿ

*Please cite this article as: ಬೈರಪ್ಪರ ಏಕಾಂತಪ್ಪ ಮತ್ತು ಹಾರಾಳು ಬುಳ್ಳಪ್ಪ.* (2022). ಗ್ರಾಮೀಣ ಆರ್ಥಿಕತೆಯಲ್ಲಿ ಪಶುಪಾಲನೆಯ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 47–53.*

ಒಂದೊಂದು ಗುಂಪು ಭಾಗಮಾಡಿ ಅವುಗಳ ಗುಂಪಿಗೆ ಒಬ್ಬ ನಾಯಕ ಅಥವಾ ಯಜಮಾನನ್ನಾನಾಗಿ ನೇಮಿಸಿ ಅದರಿಂದ ಬಂದಂತಹ ಆದಾಯದಿಂದ ಜೀವನ ನಿರ್ವಹಣೆ ಮಾಡುತ್ತಿದ್ದರು.

ವಿಜಯನಗರದ ಅರಸ ಶ್ರೀಕೃಷ್ಣದೇವರಾಯ ಪಶುಸಂಪತ್ತಿನಿಂದ ಹೆಚ್ಚಿನ ಆದಾಯ ಬರುತ್ತದೆ ಎಂಬುದನ್ನು ತಿಳಿದು ಹಸುಗಳನ್ನು ಸಂರಕ್ಷಿಸಲು ಮುಂದಾದನು ಅಲ್ಲದೆ ಯುದ್ಧದ ಸಂದರ್ಭದಲ್ಲಿ ಹಸುಗಳ ಕೊಂಬಿಗೆ ಬಟ್ಟೆ ಸುತ್ತಿ ಅಥವಾ ದನದ ಕೊಬ್ಬನ್ನು ಹಚ್ಚಿ ಬೆಂಕಿಯನ್ನು ಹಚ್ಚಿ ಯುದ್ಧದ ಸಂದರ್ಭದಲ್ಲಿ ಬಳಸಿಕೊಂಡನು. ಅಷ್ಟೇ ಅಲ್ಲ ಅರಣ್ಯ ಭೂಮಿಯನ್ನು ಉಂಬಳಿ, ಗೋಮಾಳ ಭೂಮಿಯನ್ನು ಗೋಸಂಪತ್ತಿಗೆ ನೇಮಿಸಿದ. ರಾಸುಗಳನ್ನು ಸಾಕುವವರಿಗೆ ಇಂತಿಷ್ಟು ಹಣವನ್ನು ಕೊಡಬೇಕೆಂದು ನಿರ್ಧರಿಸುತ್ತಿದ್ದರು. ಹಸುಗಳ ಬೆಳವಣಿಗೆ, ಅವುಗಳ ಆರೋಗ್ಯ ಸೇವೆ ಎಲ್ಲವನ್ನು ರಾಜಮನೆತನ ನೋಡಿಕೊಳ್ಳುತ್ತಿತ್ತು. ಇಂದಿಗೂ ಸರ್ಕಾರ ದಾಖಲೆ ಪ್ರಕಾರ ಕರ್ನಾಟಕದಲ್ಲಿ 13 ಕಾವಲುಗಳಿವೆ ಎಂಬುದನ್ನು ವಿರೂಪಾಕ್ಷಿ ಪೂಜಾರಹಳ್ಳಿ ಅವರು *'ವಿಜಯನಗರ ಕಾಲದ ಪಶು ಸಾಗಾಣಿಕೆ'* ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಗೋವುಗಳಿಗೆ ಬಿಟ್ಟಿರುವ ಭೂಮಿ ಯಾರು ಅತಿಕ್ರಮಣ ಮಾಡದಂತೆ ಗೋವು ರಕ್ಷಣೆ ಮಾಡುವ ಹಕ್ಕು ನಾಯಕರಿಗೆ ಕೊಟ್ಟಿರುತ್ತಾರೆ. ಪ್ರಸ್ತುತ ದಿನಗಳಲ್ಲಿ ಈ ಕಾವಲು ಪ್ರದೇಶಗಳು ಅತಿಕ್ರಮಣವಾಗಿದ್ದು ಕಾವಲುಗಳ ಸಂಖ್ಯೆ ಕಡಿಮೆಯಾಗಿದೆ. ಅಲ್ಲದೆ ಇರುವ ಕಾವಲುಗಳ ವಿಸ್ತಾರವೂ ಸಹ ಕಡಿಮೆಯಾಗಿದೆ.

**ಅಧ್ಯಯನದ ಉದ್ದೇಶ**

ಪಶುಪಾಲನೆಯಿಂದ ಪ್ರಸ್ತುತ ದಿನಗಳಲ್ಲಿ ಜನರಿಗೆ ಆಗುವ ಉಪಯುಕ್ತತೆ ಏನು ಎಂಬುದನ್ನು ತಿಳಿಸುವ ಉದ್ದೇಶದಿಂದ ಬಳ್ಳಾರಿ ಜಿಲ್ಲೆಯನ್ನು ವ್ಯಾಪ್ತಿಯನ್ನಾಗಿಸಿಕೊಂಡು ಅಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿನ ಮ್ಯಾಸಬೇಡ ಸಮುದಾಯದವರಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ವಿಷಯ ಮಂಡನೆ**

ಮನುಷ್ಯ ಒಬ್ಬನೇ ಬಿತ್ತಿ ಬೆಳೆದು ಆರ್ಥಿಕ ಅಭಿವೃದ್ಧಿಹೊಂದುವುದು ಸಾಧ್ಯವಿಲ್ಲ. ಪಶುಗಳಿಲ್ಲದೆ ಕೃಷಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಜಗತ್ತು ಎಷ್ಟೇ ಮುಂದುವರೆದಿದ್ದರೂ ಸಹ ಅವಶ್ಯಕವಾಗಿ ಆಹಾರ ಬೇಕು ಆಹಾರ ಬಿಟ್ಟು ಬದುಕಲು ಸಾಧ್ಯವಿಲ್ಲ ಕೃಷಿ ಅಭಿವೃದ್ಧಿಯಲ್ಲಿ ಪಶುಗಳ ಪಾಲು ಬಹುಮುಖ್ಯ. (ರೋಣಿ ಗುಂಡ) ಎತ್ತುಗಳ ಸಹಾಯದಿಂದ ರಾಗಿ, ಜೋಳ, ಸಜ್ಜೆ ಇವುಗಳನ್ನು ಬೇರ್ಪಡಿಸುತ್ತಾರೆ. ಬೆಳೆದ ಬೆಳೆಗಳು ರಾಶಿಮಾಡಿ ಮಾರುಕಟ್ಟೆ ತಲುಪಿಸುವವರೆಗೂ ಇಂದಿಗೂ ಕೃಷಿಗೆ ಪಶುಗಳ ಪಾತ್ರ ಅವಶ್ಯಕವಾಗಿದೆ.

ಕೃಷಿಕ ಬೆಳೆ ಬೆಳೆಯಬೇಕೆಂದರೆ ಗೊಬ್ಬರ ಬೇಕು. ಭೂಮಿ ವರ್ಷದಿಂದ ವರ್ಷ ಬೆಳೆ ಬೆಳೆದು ಅದರ ಮಣ್ಣಿನ ಫಲವತ್ತತೆ ಕಳೆದುಕೊಂಡಿರುತ್ತದೆ. ಆದುದರಿಂದ ಉತ್ತಮವಾಗಿ ಬೆಳೆಯಬೇಕೆಂದರೆ ಭೂಮಿಯನ್ನು ಚೆನ್ನಾಗಿ ಹದಮಾಡಿ ಕಸ, ಕಡ್ಡಿ ತೆಗೆದು ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಇತ್ಯಾದಿ ಪ್ರಾಣಿಗಳಿಂದ ಬಂದ ಸಗಣಿ ಹಾಗೂ ಪಿಚ್ಚಿಗೆ ಹೊಲಗಳಿಗೆ ಹಾಕಿ ಬಿತ್ತನೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ಭೂಮಿಯ ಫಲವತ್ತತೆ ಹೆಚ್ಚುತ್ತದೆ. ಇದರಿಂದ ಕೃಷಿಕ ಉತ್ತಮವಾದ ಬೆಳೆಗಳನ್ನು ಬೆಳೆಯುತ್ತಾನೆ. ರಾಸಾಯನಿಕ ಗೊಬ್ಬರ ಬಳಸುವುದರಿಂದ ಭೂಮಿಯ ಫಲವತ್ತತೆ ಹಾಳಾಗುತ್ತದೆ ಆದರೆ ದನಗಳ ಗೊಬ್ಬರ ಬಳಸುವುದರಿಂದ

ಭೂಮಿಯ ಫಲವತ್ತದೆ ಹೆಚ್ಚುತ್ತದೆ ಮತ್ತು ಈ ಕೃಷಿಯಿಂದ ಬೆಳೆದ ಆಹಾರ ಧಾನ್ಯಗಳನ್ನು ಸೇವಿಸುವುದರಿಂದ ಆರೋಗ್ಯಕ್ಕೆ ಯಾವುದೆ ತೊಂದರೆ ಇರುವುದಿಲ್ಲ.

**ಹಾಲು ಉತ್ಪಾದನೆ**

ಹಾಲು ಮಾನವನ ದೇಹಕ್ಕೆ ಅವಶ್ಯಕ. ಹಾಲು ಅಮೃತಕ್ಕೆ ಸಮಾನ ಎಂದು ಹೇಳಲಾಗುತ್ತದೆ. ಹಾಲಿನಲ್ಲಿ ಹೆಚ್ಚಿನ ಪ್ರಮಾಣದ ಕ್ಯಾಲ್ಶಿಯಂ ಇರುವುದು ಕಾಣಬಹುದು. ಮನುಷ್ಯ ಸದೃಢವಾಗಿ ಬೆಳೆಯಲಿಕ್ಕೆ ಹಾಲು ಸಹಕಾರಿಯಾಗಿರುತ್ತದೆ. ಹಾಲನ್ನ ನಾಟಿ ವೈದ್ಯಕ್ಕೆ ಔಷಧಿಯ ರೂಪದಲ್ಲಿಯೂ ಬಳಸುತ್ತಾರೆ. ಪಶುಪಾಲಕರು ತಮ್ಮ ಸಾಕು ಹಸು, ಮೇಕೆ, ಎಮ್ಮೆ, ಕರಿಗಳು ಕರು ಹಾಕಿದ 3–5 ದಿನಗಳವರೆಗೆ ಹಾಲನ್ನ ಹೆಚ್ಚು ಕರೆಯುವುದಿಲ್ಲ. ಏಕೆಂದರೆ ಆ ಸಮಯದಲ್ಲಿ ಹಾಲು ಸ್ವಲ್ಪ ಗಟ್ಟಿ ಇರುತ್ತದೆ ಹಾಗೂ ತುಂಬಾ ಆರೋಗ್ಯಕರವಾಗಿರುತ್ತದೆ. ಈ ಹಾಲನ್ನು ಗಿಣ್ಣದ ಹಾಲು ಎನ್ನುತ್ತಾರೆ. ಈ ಗಿಣ್ಣದ ಹಾಲನ್ನು ಕರುವಿಗೆ ಹೆಚ್ಚು ಬಿಡುತ್ತಾರೆ ಮಿಕ್ಕ ಸ್ವಲ್ಪ ಹಾಲು ಮೂರರಿಂದ ಐದು ದಿನಗಳವರೆಗೆ ಸಾಯಂಕಾಲ ಮತ್ತು ಬೆಳಗಿನ ಹಾಲನ್ನು ಕರೆದು ಸ್ವಲ್ಪ ಮಾತ್ರ ಶೇಖರಣೆ ಮಾಡುತ್ತಾರೆ. ಗಿಣ್ಣದ ಹಾಲನ್ನು ಆಹಾರವಾಗಿ ಬಳಸುತ್ತಾರೆ. ಗಿಣ್ಣದ ಹಾಲು ಹೆಚ್ಚು ಪೌಷ್ಟಿಕತೆಯನ್ನು ಹೊಂದಿದ ಹಾಲಾಗಿರುತ್ತದೆ. ಗಿಣ್ಣವನ್ನು ಜನರು ತುಂಬಾ ಇಷ್ಟಪಟ್ಟು ಸೇವಿಸುತ್ತಾರೆ.

**ಕೃಷಿ ಭೂಮಿಯಲ್ಲಿ ಮಂದೆ ಮಲಗಿಸುವುದು**

ದನಕರುಗಳ ಹಿಂಡು ಅಥವಾ ಗುಂಪನ್ನು ಮಂದೆ ಎಂದು ಕರೆಯುತ್ತಾರೆ. ಮಂದೆ ಮಲಗಿಸುವುದು ಎಂದರೆ? ದನಕರುಗಳ ಈ ಹಿಂಡನ್ನು ಅಥವಾ ಮಂದೆಯನ್ನು ಖಾಲಿ ಜಮೀನಿನಲ್ಲಿ ಕೆಲವು ದಿನಗಳವರೆಗೆ ನೆಲೆಗೊಳಿಸುವುದಾಗಿದೆ. ಅಂದೆ ಹಗಲಿನಲ್ಲಿ ಅವುಗಳು ಮೇಯಲು ಕಾಡಿಗೆ ಹೋಗಿ ರಾತ್ರಿ ಮಾತ್ರ ಈ ಜಮೀನಿನಲ್ಲಿ ಅವುಗಳನ್ನು ಮಲಗಿಸುತ್ತಾರೆ ಹೀಗೆ ಮಲಗಿಸುವುದನ್ನು ಮಂದೆ ಮಲಗಿಸುವುದು ಎನ್ನುತ್ತಾರೆ. ರೈತರು ವರ್ಷದ ಸುಗ್ಗಿಯ ಕೊನೆಯಲ್ಲಿ ತಾವು ಬಿತ್ತಿದ ಬೆಳೆ ಕಟಾವು ಮುಗಿದ ನಂತರ ಖಾಲಿ ಜಮೀನಿನಲ್ಲಿ ಭೂಮಿಯ ಫಲವತ್ತತೆಯ ದೃಷ್ಟಿಯಿಂದ ಮಂದೆಯನ್ನು ಹಾಕಿಸುತ್ತಾರೆ. ಹೊಲದಲ್ಲಿ ಮಂದೆ ಮಲಗಿಸುವುದರಿಂದ ಅವುಗಳು ವಿಸರ್ಜಿಸಿದ ಗಂಜಲ, ಸಗಣಿ, ಹಿಕ್ಕೆ ಆ ಹೊಲದ ಮಣ್ಣಿನಲ್ಲಿ ಸೇರಿ ಫಲವತ್ತತೆ ಹೆಚುತ್ತದೆ. ದನಕರುಗಳ ಗಂಜನ ತುಂಬಾ ಫಲವತ್ತತ್ತೆಯ ಗುಣವನ್ನು ಹೊಂದಿರುತ್ತದೆ ಆದ್ದರಿಂದ ಫಲವತ್ತತೆ ಕಳೆದುಕೊಂಡ ಹೊಲ ಗದ್ದೆಗಳಲ್ಲಿ ಮಂದೆ ಮಲಗಿಸುತ್ತಾರೆ. ಕುರಿ ಮೇಕೆಗಳ ಸಂಖ್ಯೆಯ ಆಧಾರದ ಮೇಲೆ ಹೊಲದ ಮಾಲಿಕನಿಂದ ಪಶುಪಾಲಕರು ಹಣ ಪಡೆಯುತ್ತಾರೆ. ಒಂದು ದಿನಕ್ಕೆ ಇಂತಿಷ್ಟು ಹಣ ಎಂದು ನಿಗದಿ ಮಾಡಿರುತ್ತಾರೆ. ಈ ಎಲ್ಲಾ ದೃಷ್ಟಿಯಿಂದ ಪಶುಪಾಲನೆ ಕೃಷಿ ಬೆಳವಣಿಗೆಗ ಅವಶ್ಯಕವಾಗಿದೆ.

**ಹಾಲಿನಿಂದ ತಯಾರಾಗುವ ಉತ್ಪನ್ನಗಳು**

ಬೇಕರಿಯ ಸಿಹಿ ತಿಂಡಿ–ತಿನಿಸುಗಳ ತಯಾರಿಕೆಯಲ್ಲಿ ಹಾಲನ್ನು ಬಳಸಿಕೊಳ್ಳಲಾಗುತ್ತದೆ. **ಬಾದಾಮಿ ಹಾಲು** ತಯಾರಿಸಲು ಹಾಲನ್ನು ಬಳಸಿಕೊಳ್ಳಲಾಗುತ್ತದೆ. ಅಲ್ಲದೆ ಕೇಕ್ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುವಾಗಿ ಹಾಲನ್ನು ಬಳಕೆಮಾಡಲಾಗುತ್ತದೆ. **ಚಾಕ್ಲೇಟ್ ತಯಾರಿಕೆಗೆ** ಕಚ್ಚಾ ವಸ್ತುವಾಗಿ ಹಾಲು, ತುಪ್ಪ, ಬೆಣ್ಣೆಯನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. **ಪನ್ನೀರ್ ತಯಾರಿಕೆಗೆ** ಹಾಲು ಮೊಸರನ್ನು ಹೆಚ್ಚಿನ ರೀತಿಯಲ್ಲಿ

ಬಳಕೆ ಮಾಡಿಕೊಳ್ಳಲಾಗುತ್ತದೆ. ಸಿಹಿ ತಿಂಡಿ ತಿನಿಸುಗಳನ್ನು ತಯಾರಿಸಲು ಹಾಲು ಮೊಸರು ತುಪ್ಪವನ್ನು ಬಳಸಿಕೊಳ್ಳುತ್ತಾರೆ. ದೇವಸ್ಥಾನಗಳಿಗೆ ಪಂಚಾಮೃತ ಇತ್ಯಾದಿ ಅಭಿಷೇಕಗಳಿಗೆ ಹಾಲು, ಮೊಸರು, ಬೆಣ್ಣೆ, ತುಪ್ಪವನ್ನ ಬಳಕೆಮಾಡಲಾಗುತ್ತದೆ. **ಬ್ರೆಡ್ ತಯಾರಿಕೆಗೆ** ಹಾಲು ಮೊಸರು ಬ್ರೆಡ್ ತಯಾರಿಕೆಯಲ್ಲಿ ಅತಿಹೆಚ್ಚಾಗಿ ಹಾಲಿನ ಉತ್ಪನ್ನಗಳು ಅವಶ್ಯಕವಾಗಿ ಬಳಸಿಕೊಳ್ಳಲಾಗುತ್ತದೆ. **ಐಸ್ ಕ್ರೀಮ್ ತಯಾರಿಕೆಗೆ** ಅತಿ ಅವಶ್ಯಕವಿರುವ ಹಾಲು ಹಾಲಿನ ಪೌಡರ್ ಇತ್ಯಾದಿಗಳನ್ನು ಹಾಲಿನಿಂದ ಬಿಡಿ ರೂಪಗಳಾಗಿ ತಯಾರಿಸಲಾಗುತ್ತದೆ. ಹಾಗೂ ಐಸ್ಕ್ರೀಮ್ ತಯಾರಿಕೆಗೆ ಅತಿ ಹೆಚ್ಚಿನ ಮಹತ್ವವನ್ನು ಹಾಲು ಪ್ರಮುಖ ಪಾತ್ರವಾಗಿ ಇರುವುದನ್ನು ಕಾಣಬಹುದು. **ತಂಪಾದ ಪಾನೀಯಗಳಿಗೆ ಹಾಲು ಅವಶ್ಯಕ** ತಂಪಾದ ಪಾನೀಯಗಳಾಗಿರುವ ಲಸ್ಸಿ, ಹಾಲಿನ ಕೋವ, ಹಾಲಿನ ಮಿಲ್ಕ್‌ಶೇಕ್ ಹಾಗೂ ಇನ್ನಿತರ ಪಾನೀಯಗಳಿಗೆ ಹಾಲು ಅವಶ್ಯಕವಾಗಿದೆ. ಅಲ್ಲದೆ ಪ್ರಸ್ತುತ ಇವತ್ತಿನ ದಿನಮಾನದಲ್ಲಿ ಮಾರುಕಟ್ಟೆಗಳಲ್ಲಿ ಸಿದ್ಧರೂಪದಲ್ಲಿ ದೊರೆಯುವ ಹಾಲಿನ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ಸಣ್ಣ ಮಕ್ಕಳಿಗೆ ಬೇಕಾಗುವ ಹಾಲಿನ ಪೌಡರ್, ದೊಡ್ಡವರಿಗೆ ಬೇಕಾಗುವ ಹಾಲಿನ ಪೌಡರ್‌ಗಳಿಗೆ ಹಾಗೂ ಆಸ್ಪತ್ರೆಗಳಿಗೆ ರೋಗಿಗಳಿಗೆ ಹೆಚ್ಚಿನ ರೀತಿಯಲ್ಲಿ ಔಷಧಿಗಳನ್ನು ತಯಾರಿಸಲು ಬಳಸಿಕೊಳ್ಳಲಾಗುತ್ತದೆ.

**ಮೊಸರು**

ಮೊಸರು ಆರೋಗ್ಯಕರ ಆಹಾರವಾಗಿದೆ. ಸರಳವಾದ ಜೀರ್ಣಕ್ರಿಯೆಯನ್ನು ಹೊಂದಿರುವ ಆಹಾರವಾಗಿದೆ. ಮೊಸರಿನಲ್ಲಿ ಸಿಟ್ರಿಕ್ ಆಮ್ಲ ಸಿ ಜೀವಸತ್ವ ಒಳಗೊಂಡಿದೆ. ಹಸು, ಎಮ್ಮೆಯಿಂದ ಕರದಂತಹ ಸ್ವಚ್ಛವಾದ ಹಾಲನ್ನು ಕೆನೆ ಬರುವ ಹಾಗೆ ಕಾಯಿಸಿ ನಂತರ ಸ್ವಚ್ಛವಾದ ಪಾತ್ರೆಯಲ್ಲಿ ಹಾಲನ್ನು ಹಾಕಿ ಅದರ ಜೊತೆಗೆ ಸ್ವಲ್ಪ ಪ್ರಮಾಣದ ಹೆಪ್ಪು ಹಾಕಿ ಮೊಸರು ಮಾಡುತ್ತಾರೆ. ರಾತ್ರಿ ಹಾಲು ಕಾಯಿಸಿ ಹೆಪ್ಪು ಹಾಕಿದರೆ ಬೆಳಿಗ್ಗೆ 5ರಿಂದ 8 ತಾಸಿನ ಒಳಗಾಗಿ ಮೊಸರು ಆಗಿರುತ್ತದೆ. ಮೊಸರನ್ನ ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಹೋಟೆಲುಗಳಿಗೆ ಹಾಗೂ ಮಾಲ್ಗಳಿಗೆ ಶ್ರೀಮಂತ ಕುಟುಂಬದವರಿಗೆ ಅಳತೆ ಮಾಪನದಿಂದ ಇಷ್ಟೇ ಹಣ ನಿಗದಿ ಮಾಡಿ ಮಾರಾಟ ಮಾಡಲಾಗುತ್ತದೆ.

**ಮಜ್ಜಿಗೆ**

ಮೊಸರಿನಿಂದ ಮಜ್ಜಿಗೆ ತಯಾರಾಗುತ್ತದೆ. ಹಾಲಿನಿಂದ ಮೊಸರು ಪರಿವರ್ತನೆಯಾಗುತ್ತದೆ ನಂತರ ಮೊಸರಿನಿಂದ ಮಜ್ಜಿಗೆ ಮಾಡುತ್ತಾರೆ. ಮನೆಯಲ್ಲಿ ಒಂದು ಸ್ವಚ್ಛವಾದ ಪಾತ್ರೆ ಅಥವಾ ಸೋರೆ ಅಥವಾ ಕುಂಭದಲ್ಲಿ ಸ್ವಚ್ಛವಾದ ನೀರು ಮೊಸರು ಸೇರಿಸಿ ಪಾತ್ರೆಯಲ್ಲಿ ಹಾಕಿ ಕಡೆಗೋಲು ಸಹಾಯದಿಂದ ಕಡೆಗಳಿಗೆ ಒಂದು ಮಧ್ಯದಲ್ಲಿ ಒಂದು ಹಗ್ಗಕಟ್ಟಿ ಒಂದು ಅರ್ಧ ಮಾರಿನ ಹಗ್ಗ ತೆಗೆದುಕೊಂಡು ಕಡಗೋಲಿಗೆ ಸುತ್ತಿ ಮೊಸರು ಮತ್ತು ನೀರನ್ನು ಸೇರಿಸಿ ಕಡೆಗೋಲಿನಿಂದ ಕಡೆದು ಮಜ್ಜಿಗೆ ತಯಾರಿಸುತ್ತಾರೆ. ಮಜ್ಜಿಗೆಯನ್ನು ಊಟಕ್ಕೆ ಬಳಸುತ್ತಾರೆ. ಬೇಸಿಗೆಯಲ್ಲಿ ಮಜ್ಜಿಗೆ ಜನರಿಗೆ ತಂಪಾದ ಪಾನೀಯ ರೀತಿಯಲ್ಲಿ ಉಪಯೋಗವಾಗುತ್ತದೆ.

**ಬೆಣ್ಣೆ**

ಬೆಣ್ಣೆಯನ್ನು ಅತ್ಯಂತ ನಾಜೂಕಾಗಿ ಅತ್ಯಂತ ಜಾಣ್ಮೆಯಿಂದ ಮಜ್ಜಿಗೆಯಿಂದ ಬೇರ್ಪಡಿಸುತ್ತಾರೆ. ಯಾವ ರೀತಿಯಾಗಿ ಮೊಸರನ್ನು ಕಡಗೋಲು ಸಹಾಯದಿಂದ ಕಡೆದು ಮಿಕ್ಸ್ ಮಾಡಿದಾಗ ಕೆನೆಪದರ ರೀತಿಯಲ್ಲಿ

ಮೇಲೆ ದ್ರವದ ರೂಪದಲ್ಲಿ ಮಜ್ಜಿಗೆಯಿಂದ ಬೆಣ್ಣೆ ಬೇರ್ಪಡುತ್ತದೆ. ಆ ಬೆಣ್ಣೆಯನ್ನು ಒಂದು ಪಾತ್ರೆಯಲ್ಲಿ ನೀರಿನಲ್ಲಿ ಶೇಖರಿಸಿ ದ್ರವದಿಂದ ಬೆಣ್ಣೆಯನ್ನು ತೆಗೆದು ಗಾಳಿಗೆ ಹಾಗೂ ಬಿಸಿಲಿಗೆ ತಾಗದ ರೀತಿಯಲ್ಲಿ ಶೇಖರಿಸಿ ನಗರ ಹಾಗೂ ಪಟ್ಟಣ ಪ್ರದೇಶಗಳಿಗೆ ಹೋಗಿ ಸೇರು, ಮಣ ಹಾಗೂ ತೂಕ ಅಳತೆಯಲ್ಲಿ ಒಂದು ಕೆಜಿಗೆ 400 ರಿಂದ 500 ರೂಪಾಯಿಗಳವರೆಗೆ ಮಾರಾಟ ಮಾಡಲಾಗುತ್ತದೆ. ಬೆಣ್ಣೆಯೂ ಸಹ ಆರೋಗ್ಯದ ದೃಷ್ಟಿಯಿಂದ ಮತ್ತು ರುಚಿಯ ದೃಷ್ಟಿಯಿಂದ ಜನರಿಗೆ ಉತ್ತಮ ಆಹಾರ ಪದಾರ್ಥವಾಗಿ ಉಪಯುಕ್ತವಾಗಿದೆ.

**ತುಪ್ಪ**

ಬೆಣ್ಣೆಯಿಂದ ತಯಾರಾಗುವುದೇ ತುಪ್ಪ. ಬೆಣ್ಣೆ ಕಾಯಿಸಿ ತುಪ್ಪ ತಯಾರಿಸುವುದು ಒಂದು ನಾಜೂಕಾದ ಕಲೆಯೆಂದು ಹೇಳಬಹುದು. ಗ್ರಾಮೀಣ ಜನಪದರು ಬೆಣ್ಣೆಯನ್ನು ತೆಗೆದುಕೊಂಡು ಮಣ್ಣಿನ ಅಥವಾ ಸ್ಟೀಲ್ ಪಾತ್ರೆಯಲ್ಲಿ ಹಾಕಿ ತಂಗಟಿ ಗಿಡಗ ಕಟ್ಟಿಗೆಯಿಂದ ಒಲೆಯಲ್ಲಿ ಬೆಣ್ಣೆ ಕೆಂಪಗಾಗುವಂತೆ ಕಾಯಿಸಿ ತುಪ್ಪ ಮಾಡುತ್ತಾರೆ. ತುಪ್ಪವೂ ಸಹ ಊಟಕ್ಕೆ ಬಳಸುವ ಪದಾರ್ಥವಾಗಿದ್ದು ಇದಕ್ಕೆ ಹೆಚ್ಚು ಬೆಲೆಯಿದೆ. ತುಪ್ಪವನ್ನು ತಿಂದರೆ ಬುದ್ದಿ ವೃದ್ಧಿಯಾಗುತ್ತದೆ ಎಂದು ಗ್ರಾಮೀಣ ಜನಪದರ ನಂಬಿಕೆಯಾಗಿದೆ. ವೈದ್ಯರೂ ಸಹ ತುಪ್ಪವನ್ನು ತಿನ್ನಲೂ ಸಲಹೆ ಮಾಡುತ್ತಾರೆ.

**ಗೋಬರ್ ಗ್ಯಾಸ್ ತಯಾರಿಕೆ**

ಗೋಬರ್ ಗ್ಯಾಸ್ ಅನ್ನು ದನಕರುಗಳ ಸಗಣಿ, ಕುರಿಯ ಹಿಕ್ಕೆ, ಹಸುವಿನ ಗಂಜಲ ಇವುಗಳನ್ನು ಒಂದೆಡೆ ಗುಂಡಿಯಲ್ಲಿ ಶೇಖರಣೆಮಾಡಿ ಅನಿಲ ರೂಪದಲ್ಲಿ ಇದನ್ನು ತಯಾರಿಸಲಾಗುತ್ತದೆ. ಗೋಬರ್ ಗ್ಯಾಸ್ ಅನ್ನು ಮಾಡಲಿಕ್ಕೆ ಉರುವಲಾಗಿ ಬಳಸಲಾಗುತ್ತದೆ. ಗೋಬರ್ ಗ್ಯಾಸ್ ಇಂದು ಕಡಿಮೆಯಾಗಿದೆ. ಅನಿಲ ರೂಪದ ಗ್ಯಾಸ್ ಸಿಗುವುದರಿಂದ ಗೋಬರ್ ಗ್ಯಾಸ್ ಅನ್ನು ತಯಾರಿಸುವುದು ಕಡಿಮೆಯಾಗಿದೆ ಎಂದು ಹೇಳಬವುದು. ಕಾರಣ ಪ್ರಸ್ತುತ ಅನಿಲ ಎಲ್.ಪಿ.ಜಿ ಅನಿಲ ದೊರೆಯುವುದರಿಂದ ಹಳ್ಳಿಗಳಲ್ಲಿ ರೈತರು ತಯಾರಿಸುವ ಗೋಬರ್ ಗ್ಯಾಸ್ ಪ್ರಸ್ತುತ ದಿನದಲ್ಲಿ ಕಡಿಮೆಯಾಗುತ್ತಿರುವುದನ್ನು ನಾವು ನೋಡಬಹುದು.

**ಗೋಮೂತ್ರ**

ಗೋಮೂತ್ರ ದೇವರ ಪೂಜಾ ವಿಧಿ ವಿಧಾನಗಳಿಗೂ ಬಳಸಲಾಗುತ್ತದೆ. ದೇವರಿಗೆ ಪೂಜೆ ಮಾಡುವಾಗ, ಹೊಸ ಮನೆ ಗೃಹಪ್ರವೇಶ ಮಾಡುವಾಗ, ಮನೆಯನ್ನು ಮೈಲಿಗೆಯಿಂದ ಶುಚಿಗೊಳಿಸುವ ಸಂದರ್ಭದಲ್ಲಿ, ಯಾರಾದರೂ ಚಪ್ಪಲಿಯಿಂದ ಹೊಡೆದಾಡಿ ಮೈಲಿಗೆ ಆದಾಗ ಗೋಮೂತ್ರವನ್ನು ಸಿಂಪಡಿಸಿ ಶುಚಿಗೊಳಿಸಲಾಗುತ್ತದೆ. ಅಲ್ಲದೆ ಸೂತಕ ತೆಗೆಯುವುದು, ಹುಟ್ಟಿದಾಗ ಅಥವಾ ಮರಣ ಆದಾಗ, ನಾಮಕರಣ ಸಂದರ್ಭದಲ್ಲಿ ಮುಂತಾದ ಶುಭ ಸಂದರ್ಭದಲ್ಲಿ ಗೋಮೂತ್ರದಿಂದ ಸಿಂಪಡಿಸಿ ಕರ್ಮಫಲಗಳನ್ನು ಕಳೆಯುತ್ತಾರೆ. ಗೋಮೂತ್ರವನ್ನು ಆರೋಗ್ಯದ ದೃಷ್ಟಿಯಿಂದಲೂ ಸಹ ಗ್ರಾಮೀಣರು ಬಳಸುತ್ತಾರೆ. ಚಿಕ್ಕ ಮಕ್ಕಳಿಗೆ ಕೆಮ್ಮು ಆದಾಗ ಎಳೆ ಕರುವಿನ ಗಂಜಲ(ಗೂಮೂತ್ರವನ್ನು) ಕುಡಿಸುತ್ತಾರೆ ಹೀಗೆ ಮಾಡುವುದರಿಂದ ಕೆಮ್ಮು ಕಡಿಮೆಯಾಗುತ್ತದೆ. ಒಟ್ಟಾರೆ ಗೂಮೂತ್ರ ಪವಿತ್ರತೆಯ ದೃಷ್ಟಿಯಿಂದಲೂ, ಆರೋಗ್ಯದ ದೃಷ್ಟಿಯಿಂದಲೂ, ಸಂಪ್ರದಾಯದ ದೃಷ್ಟಿಯಿಮದಲೂ ಮಾನವನಿಗೆ ಉಪಯುಕ್ತವಾಗಿದೆ.

**ಉಪಯುಕ್ತ ವಸ್ತಗಳ ತಯಾರಿಕೆ**

ಹಸು, ಕುರಿ, ಮೇಕೆ, ಎಮ್ಮೆ ಇತ್ಯಾದಿಗಳ ಮಾಂಸ ಅತ್ಯಂತ ಹೆಚ್ಚು ಕೊಬ್ಬಿನ ಅಂಶದಿಂದ ಕೂಡಿರುವುದರಿಂದ ಉತ್ತಮ ಬೆಲೆ ಆರಂಭವಾಗಿದೆ. ಮಾಂಸಕ್ಕಾಗಿ ಕ್ರಾಸಿಂಗ್ ಹೈಬ್ರಿಡ್ ತಳಿಯ ಧನ, ಕುರಿ ಮೇಕೆಗಳ ಮಾಂಸಗಳಿಗಾಗಿ ಫಾರಂಗಳು ನಿರ್ಮಾಣಮಾಡಿ ಮಾಂಸಕ್ಕಾಗಿ ಮಾರಾಟ ಮಾಡಲಾಗುತ್ತದೆ. ಎಮ್ಮೆ, ಆಕಳು, ಎತ್ತುಗಳ ಕೊಂಬಿನಿಂದ ಗುಂಡಿ, ಅಲಂಕಾರಿಕ ವಸ್ತುಗಳನ್ನು ತಯಾರಿಸಲಾಗುತ್ತದೆ. ಕುರಿ, ಟಗರುಗಳ ಉಣ್ಣೆಯಿಂದ ಬಟ್ಟೆ ತಯಾರಿಕೆ, ಕಂಬಳಿ ತಾಯೀರಿಕೆ, ದನಕರುಗಳ ಚರ್ಮದಿಂದ ಚಪ್ಪಲಿ ತಯಾರಿಕೆ, ಬ್ಯಾಗು ತಯಾರಿಕೆ, ಜರ್ಕಿನ್ ತಯಾರಿಕೆ, ಹಲಗೆ ತಯಾರಿಸುವುದು, ಉರಿಮೆ ತಯಾರಿಸುವುದು, ಎತ್ತುಗಳಿಗೆ, ಹಸುಗಳಿಗೆ, ಎಮ್ಮೆಗಳಿಗೆ ಕಟ್ಟಲಿಕ್ಕೆ ಅಗತ್ಯವಿರುವ ಪಟಗಣಿ, ಮಿಣಿ, ಬಾರುಕೋಲು ತಯಾರಿಸುತ್ತಾರೆ, ಕುರಿ–ಮೇಕೆ ಚರ್ಮದಿಂದ ಮಕ್ಕಳ ಆಟಿಕೆ ವಸ್ತುಗಳು ತಯಾರಿಸುವುದು, ಡಮರುಗ ತಯಾರಿಸುವುದು, ದೇವಸ್ಥಾನದ ಪವಿತ್ರವಾದ ತಬಲ(ನಗಾರಿ/ಧಗಮು) ತಯಾರಿಕೆ ಇತ್ಯಾದಿ ಅಗತ್ಯ ವಸ್ತುಗಳನ್ನು ತಾಯಾರಿಸಿ ಬಳಕೆ ಮಾಡಲು ಉಪಯುಕ್ತವಾಗಿದೆ.

ಕುರಿಯ ಕೂದಲಿನಿಂದ ಕಂಬಳಿಯನ್ನು ತಯಾರಿಸುತ್ತಾರೆ. ಕುರಿಯ ಕೂದಲಿನಿಂದ ತಯಾರಿಸಿದ ಕಂಬಳಿ ಧಾರ್ಮಿಕ ಹಾಗೂ ಶುಭ ಸಂದರ್ಭಗಳಲ್ಲಿ ಬಳಸುತ್ತಾರೆ. ನಾಮಕರಣ, ಋತುಮತಿ, ಮದುವೆ ಮುಂತಾದ ಆಚರಣೆಗಳಲ್ಲಿ ದೇವರ ಪೂಜಾ ಸಂದರ್ಭದಲ್ಲಿ ಕರಿ ಕುರಿಯ ಕಂಬಳಿ ಗದ್ದಿಗೆ ಹಾಸಿ ಪೂಜೆ ಮಾಡಲಾಗುತ್ತದೆ. ಕರಿ ಕಂಬಳಿ ಇಲ್ಲದೆ ಯಾವುದೇ ಸಾಂಪ್ರದಾಯಿಕ ಆಚರಣೆ ನಡೆಯುವುದಿಲ್ಲ. ಮಾನವನ ಹುಟ್ಟಿನಿಂದ ಸಾವಿನವರೆಗಿನ ಎಲ್ಲಾ ಆಚರಣೆಗಳಲ್ಲಿ ಕಂಬಳಿಯ ಉಪಯುಕ್ತತೆ ಅಗತ್ಯ. ಕಂಬಳಿಯನ್ನು ಮಳೆತರಿಸುವ ಉಪಕರಣವಾಗಿ ಬಳಸುತ್ತಾರೆ, ಉದಾಹರಣೆಗೆ: ಕೊಟ್ಟೂರು ತಾಲೂಕಿನ ಉಜ್ಜಿನಿ ಗ್ರಾಮದಲ್ಲಿ ಬರಗಾಲ ಬಂದು ಮಳೆಯಿಲ್ಲದೆ ಬೆಳೆಗಳು ಒಣಗಿದ ಪರಿಸ್ಥಿತಿ ಇರುವಾಗ ಗ್ರಾಮಸ್ಥರೆಲ್ಲರೂ ಸೇರಿ ಕರಿ ಕಂಬಳಿ ಬೀಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಎಲ್ಲರೂ ಸೇರಿ ಶನಿವಾರ ಆಗಸ್ಟ್ 14/2021 ರಂದು ಉಜ್ಜಿನಿ ಗ್ರಾಮದಿಂದ ಮೂರು ಕಿ.ಮೀ.ದೂರದ ಕರದಿನ ಕಲ್ಲು ಗುಡ್ಡಕ್ಕೆ ತೆರಳಿ ಅಲ್ಲಿ ಮೂಗಣ್ಣ ದೇವರಿಗೆ 103 ತಂಬಿಗೆ ನೀರಿನ ಅಭಿಷೇಕ ಮಾಡಿದರು. ನಂತರ ದೇವರಿಗೆ ಪ್ರಾರ್ಥಿಸಿಕೊಂಡು ಈ ಗ್ರಾಮದ ಹಾಲುಮತ ಸಮುದಾಯದ **ಜೆಡೆ ಸಿದ್ದಪ್ಪ** ಎಂಬುವರು ಗುಡ್ಡದ ಮೇಲಿ ನಿಂತು ಮೋಡಕ್ಕೆ ಕರಿ ಕಂಬಳಿ ಬೀಸಿ ಮಳೆಯನ್ನು ಮಳೆರಾಯ ಬಾರಪ್ಪ ಎಂದು ಕರೆದರು ಕೆಲವೇ ನಿಮಿಷಗಳಲ್ಲಿ ಉಜ್ಜಿನಿ ಸುತ್ತ ಭಾರೀ ಮಳೆ ಸುರಿಯಿತು. ಇದರಿಂದ ಜನತೆಗೆ ಆಶ್ಚರ್ಯ ಮೂಡಿಸಿತು.

**ಉಪಸಂಹಾರ**

ಮಾನವನ ವಿಕಾಸದ ಹಂತದಲ್ಲಿ ಆಹಾರ ಸಂಗ್ರಹಣೆ, ಬೇಟೆ ಹಂತಗಳ ನಂತರ ಪಶುಪಾಲಾನಾ ಹಂತದಲ್ಲಿ ಮಾನವಗಿಗೆ ಹೆಚ್ಚು ಭದ್ರತೆ ದೊರೆಯಿತು ಎಂದು ಹೇಳಬಹುದು. ಪಶುಪಾಲನೆಯಿಂದ ಅಂದಿನ ಮಾನವನಿಗೆ ಆಹಾರ ಭಧ್ರತೆ ಜೊತಗೆ ಜೀವನ ಭದ್ರತೆ ದೊರೆಯಿತು. ಪಶುಪಾಲನೆಯಿಂದ ಹತ್ತು ಹಲವು ಉಪಯೋಗಗಳನ್ನು ಕಂಡುಕೊಂಡ ಮಾನವ ಅಂದಿನಿಂದ ಇಂದಿನವರೆಗೆ ಅದನ್ನು ಮುಂದುವರೆಸಿಕೊಂಡು ಬಂದಿದ್ದಾನೆ. ಪ್ರಾಚೀನ ಕಾಲದಿಂದಲೂ ಪಶುಪಾಲನೆಯಿಂದ ಮಾನವಗಿದೆ ಒಂದಲ್ಲಾ ಒಂದು ವಿಧದಲ್ಲಿ ಉಪಯುಕ್ತತೆ ಇದ್ದೇ ಇದೆ. ಈ ಮೇಲೆ ವಿವರಿಸದ ಉಪಯುಕ್ತತೆಗಳಲ್ಲದೇ ಇನ್ನು ಅನೇಕ ಉಪಯುಕ್ತತೆ

ಇದೆ. ಒಟ್ಟಾರೆಯಾಗಿ ಪಶುಪಾಲನೆ ಮಾನವನಿಗೆ ಆರೋಗ್ಯ ದೃಷ್ಟಿಯಿಂದ, ಆರ್ಥಿಕತೆಯ ದೃಷ್ಟಿಯಿಂದ, ಸಂಸ್ಕೃತಿ ಮುಂದುವರಿಕೆಯ ದೃಷ್ಟಿಯಿಂದ, ರಕ್ಷಣೆಯ ದೃಷ್ಟಿಯಿಂದ ಹೀಗೆ ಹತ್ತು ಹಲವು ದೃಷ್ಟಿಯಿಂದ ಉಪಯುಕ್ತವಾಗಿದೆ. ಹೀಗೆ ಆದಿಮ ಕಾಲದಿಂದ ಆಧುನಿಕ ಕಾಲದವರೆಗೆ ಮಾನವಗಿಗೆ ಉಪಯುಕ್ತವಾಗಿರುವ ಈ ಪಶುಪಾಲನೆಯನ್ನು ಮುಂದುವರೆಸುವ, ಉಳಿಸುವ ನಿಟ್ಟಿನಲ್ಲಿ ಸರ್ಕಾರ, ಸಂಘಸಂಸ್ಥೆಗಳು, ಯುವಜನೆತೆ ಮುಂದಾಗಬೇಕು, ಹುಲ್ಲುಗಾವಲುಗಳ ರಕ್ಷಣೆಯಾಗಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಮುತ್ತಯ್ಯ ಎಸ್. ಎಂ. (2009). ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು: ಪರಂಪರೆ–ಆಧುನಿಕತೆ. ಸಂ–6.
- ವಿರೂಪಾಕ್ಷಿ ಪೂಜಾರಹಳ್ಳಿ. (2008). ವಿಜಯನಗರ ಕಾಲದ ಸಂಸ್ಕೃತಿ (ಬೇಟೆ, ಪಶುಪಾಲನೆ ಮತ್ತು ಕೃಷಿ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಈಶ್ವರಪ್ಪ ಎಂ ಜಿ. (1995). ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಚಂದ್ರ ಕಾಳೇನಹಳ್ಳಿ. ಕೃಷಿ ಪರಂಪರೆ. ರಮೇಶ ಸ.ಚಿ. (ಸಂ.) ಕೃಷಿ ಜ್ಞಾನ ಪರಂಪರೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.